# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 1267 |
| **ಸದಸ್ಯರ ಹೆಸರು** | : | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು). |
| **ಉತ್ತರಿಸುವ ದಿನಾಂಕ** | : | 17.12.2025. |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>(ಅ)</td>
<td>ಕಳೆದ 3 ವರ್ಷಗಳಲ್ಲಿ ಕರ್ನಾಟಕ ಮೆರಿನ್ ಬೋರ್ಡ್ ಕರ್ನಾಟಕದ ಯಾವ ಯಾವ ಪ್ರದೇಶಗಳಲ್ಲಿ ಒಳನಾಡಿನ ಜಲ ಮಾರ್ಗಗಳನ್ನು ಅಭಿವೃದ್ಧಿ ಮಾಡಿರುತ್ತದೆ: ಕರ್ನಾಟಕದಲ್ಲಿ ಇರುವ ಜಲ ಬಂದರುಗಳು ಎಷ್ಟು:</td>
<td>ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡ ಒಳನಾಡು ಜಲಮಾರ್ಗ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ:
<table>
<tr><th colspan="2">ಕೇಂದ್ರ ಸರ್ಕಾರದ ಸಾಗರಮಾಲಾ ಯೋಜನೆಯಡಿ:</th></tr>
<tr><td>1.</td><td>ಉತ್ತರ ಕನ್ನಡ (ಕುಮಟಾ) : ತದಡಿ-ಅಘನಾಶಿನಿ ಜಲಮಾರ್ಗದ ಸಮಗ್ರ ಅಭಿವೃದ್ಧಿ.</td></tr>
<tr><td>2.</td><td>ಉತ್ತರ ಕನ್ನಡ (ಕಾರವಾರ) : ಕಾಳಿ ನದಿ (NW-52) ಜಲಮಾರ್ಗದ ಅಭಿವೃದ್ಧಿ (ಮೊದಲನೇ ಹಂತ)</td></tr>
<tr><td>3.</td><td>ಮಂಗಳೂರು : ಗುರುಪುರ ನದಿ (NW-43) ಜಲಮಾರ್ಗ ಅಭಿವೃದ್ಧಿ.</td></tr>
<tr><td>4.</td><td>ಬಾಗಲಕೋಟೆ ಮತ್ತು ವಿಜಯಪುರ : ಘಟಪ್ರಭಾ ನದಿಯ ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನಲ್ಲಿ "ಆಲಮಟ್ಟಿ-ಬಾಗಲಕೋಟೆ (NW-41) ಜಲಮಾರ್ಗದ ಅಭಿವೃದ್ಧಿ.</td></tr>
</table>
<table>
<tr><th colspan="2">ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ (PPP)</th></tr>
<tr><td>1.</td><td>ಮಂಗಳೂರಿನ ಗುರುಪುರ ಹಾಗೂ ನೇತ್ರಾವತಿ ನದಿಗಳಲ್ಲಿ ಜಲಮೆಟ್ರೋ ಸೇವೆಗಳನ್ನು ಒದಗಿಸುವ ಯೋಜನೆ</td></tr>
</table>
ರಾಜ್ಯದಲ್ಲಿ ಈ ಕೆಳಕಂಡ, ಒಟ್ಟು 13 ಕಿರು ಬಂದರುಗಳಿದ್ದು, ಇವು ಕರ್ನಾಟಕ ಜಲಸಾರಿಗೆ ಮಂಡಳಿಯ ಅಧೀನದಲ್ಲಿವೆ.
<table>
<tr><td>1) ಕಾರವಾರ<br>2) ಬೇಲೇಕೇರಿ<br>3) ಕೇಣಿ<br>4) ತದಡಿ<br>5) ಪಾವಿನಕುರ್ವೆ<br>6) ಹೊನ್ನಾವರ</td><td>7) ಮಂಕಿ<br>8) ಭಟ್ಕಳ<br>9) ಕುಂದಾಪುರ<br>10)ಹಂಗಾರಕಟ್ಟಾ<br>11) ಮಲ್ಪೆ<br>12) ಪಡುಬಿದ್ರಿ<br>13) ಹಳೆ ಮಂಗಳೂರು.</td></tr>
</table>
ಇದಲ್ಲದೇ ಒಂದು ಬೃಹತ್ ಬಂದರು (ನವ ಮಂಗಳೂರು ಬಂದರು) ಇದ್ದು, ಇದು ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ"</td>
</tr>
</table>

| | | |
|---|---|---|
| (ಆ) | ಕರ್ನಾಟಕ ಜಲ ಸಾರಿಗೆ ಮಂಡಳಿಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಆಗಿರುವ ಅನುದಾನವೆಷ್ಟು; ವೆಚ್ಚವಾಗಿರುವ ಅನುದಾನವೆಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು): | ಕರ್ನಾಟಕ ಜಲಸಾರಿಗೆ ಮಂಡಳಿಗೆ ಕಳೆದ 3 ವರ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಆಗಿರುವ ಅನುದಾನ ಮತ್ತು ಬರಿಸಲಾದ ವೆಚ್ಚದ ಪೂರ್ಣ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ |
| (ಇ) | ಕರ್ನಾಟಕದ ಅಂತರ್ಜಲ ಮಾರ್ಗಗಳು ಮತ್ತು ಕರ್ನಾಟಕದ ಕರಾವಳಿ ಪ್ರವಾಸೋದ್ಯಮ ಸಂಬಂಧ ಕಳೆದ 3 ವರ್ಷಗಳಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ: ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ಆಗಿರುವ ವೆಚ್ಚವೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು): | ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಕಳೆದ 3 ವರ್ಷಗಳಲ್ಲಿ ಒಳನಾಡು ಜಲಮಾರ್ಗ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳು ಮತ್ತು ಬಿಡುಗಡೆಯಾಗಿರುವ ಅನುದಾನ/ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ. |

**₹ ಕೋಟಿಗಳಲ್ಲಿ**

| ಕ್ರ ಸಂ. | ಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|
| 1 | ಗುರುಪುರ ನದಿ ಜಲಮಾರ್ಗದ (NW-43) ಅಭಿವೃದ್ಧಿ | 0.1 | 0.1 |
| 2 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ತದಡಿ-ಅಘನಾಶಿನಿ ಜಲಮಾರ್ಗದ ಅಭಿವೃದ್ಧಿ. | 3.04 | 3.04 |
| 3 | ಆಲಮಟ್ಟಿ-ಬಾಗಲಕೋಟೆ ಜಲಮಾರ್ಗದ (NW-41) ಅಭಿವೃದ್ಧಿ | 0 | 0 |
| 4 | ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಕಾಳಿ ನದಿ (NW-52) ಜಲಮಾರ್ಗ ಅಭಿವೃದ್ಧಿ (1ನೇ ಹಂತ) | 2.7 | 1.8 |
| 5 | ಮಂಗಳೂರಿನ ಗುರುಪುರ ಹಾಗೂ ನೇತ್ರಾವತಿ ನದಿಗಳಲ್ಲಿ ಜಲಮೆಟ್ರೋ ಸೇವೆಗಳನ್ನು ಒದಗಿಸುವ ಯೋಜನೆ | 0 | 0 |

| | | |
|---|---|---|
| ತ) | ಕರ್ನಾಟಕ ರಾಜ್ಯ ಎಷ್ಟು ನಾಟಿಕಲ್ ಕಡಲ ತೀರವನ್ನು ಹೊಂದಿರುತ್ತದೆ: ಕರ್ನಾಟಕದಲ್ಲಿರುವ ಬಂದರುಗಳ ಸಂಖ್ಯೆ ಎಷ್ಟು: ಈ ಬಂದರುಗಳ ಮೂಲಕ ಆಗುತ್ತಿರುವ ವಾರ್ಷಿಕ ವಹಿವಾಟು ಎಷ್ಟು: | ಕರ್ನಾಟಕ ರಾಜ್ಯವು ಸುಮಾರು 185.21 ನಾಟಿಕಲ್ ಮೈಲಿ (ಸುಮಾರು 343 ಕಿ.ಮೀ) ಕಡಲ ತೀರವನ್ನು ಹೊಂದಿದೆ.<br>ರಾಜ್ಯದಲ್ಲಿ ಒಟ್ಟು 13 ಸಣ್ಣ ಬಂದರುಗಳು ಹಾಗೂ ಒಂದು ಬೃಹತ್ ಬಂದರು (ನವ ಮಂಗಳೂರು ಬಂದರು) ಇರುತ್ತದೆ.<br><br>2024-25ನೇ ಸಾಲಿನಲ್ಲಿ ಕಾರವಾರ ಬಂದರಿನಲ್ಲಿ 5,50,502 ಮೆಟ್ರಿಕ್ ಟನ್ ಸರಕು ನಿರ್ವಹಣೆ ಹಾಗೂ ಹಳೇ ಮಂಗಳೂರು ಬಂದರಿನಲ್ಲಿ 55,505 ಮೆಟ್ರಿಕ್ ಟನ್ ಸರಕು ನಿರ್ವಹಣೆ ವಾರ್ಷಿಕ ವಹಿವಾಟು ಮಾಡಲಾಗಿರುತ್ತದೆ. ಉಳಿದ ಬಂದರುಗಳಲ್ಲಿ ಯಾವುದೇ ವಾಣಿಜ್ಯ ಸರಕು ವಹಿವಾಟು ನಡೆಯುತ್ತಿರುವುದಿಲ್ಲ. |
| (ಉ) | ಕರ್ನಾಟಕ ಕರಾವಳಿ ಪ್ರದೇಶವು ಎಷ್ಟು ದ್ವೀಪಗಳನ್ನು ಹೊಂದಿರುತ್ತದೆ: ಇದರ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳೇನು: ಇದುವರೆಗೂ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿ ಒಟ್ಟು 106 ದ್ವೀಪಗಳಿವೆ. ಸರ್ಕಾರವು ಸದರಿ ದ್ವೀಪಗಳನ್ನು ಪರಿಸರ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತದೆ. ಕೈಗೊಂಡಿರುವ ಅಭಿವೃದ್ಧಿ ಕ್ರಮಗಳ ವಿವರ:<br><br>ಉತ್ತರ ಕನ್ನಡ ಜಿಲ್ಲೆ (7 ದ್ವೀಪಗಳು): ಪರಿಸರ ಪ್ರವಾಸೋದ್ಯಮವನ್ನು (Eco-Tourism) ಸಾರ್ವಜನಿಕ - ಖಾಸಗಿ ಸಹಭಾಗಿತ್ವದಲ್ಲಿ (PPP Model) ಅಭಿವೃದ್ಧಿಪಡಿಸಲು ವ್ಯವಹರಣಾ ಸಲಹೆಗಾರರನ್ನು (Transaction Advisor) ಆಯ್ಕೆ ಮಾಡಲಾಗಿದ್ದು, ಕಾರ್ಯಸಾಧ್ಯತಾ ವರದಿ (Feasibility Report) ತಯಾರಿಸಲಾಗುತ್ತಿದೆ.<br><br>ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆ: ಉಡುಪಿ ಜಿಲ್ಲೆಯ 07 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ 01 ದ್ವೀಪಗಳಿಗೆ Feasibility Report ತಯಾರಿಸಲಾಗಿದೆ. ಈ ಪೈಕಿ 3 ದ್ವೀಪಗಳಾದ ದರಿಯಾ ಬಹದ್ದೂರ್ ಘಡ, ಮಲ್ಪೆ ಮತ್ತು ಅಯಾಬಾ ದ್ವೀಪಗಳನ್ನು ಅಭಿವೃದ್ಧಿಪಡಿಸಲು GIS ಆಧಾರಿತ ಮಾಸ್ಟರ್ ಪ್ಲಾನ್ (Master Plan) ಸಿದ್ಧಪಡಿಸಲಾಗಿದೆ. |

**IDD 117 PSP 2025**

**(ಮಂಕಾಳ ಎಸ್. ವೈದ್ಯ)**
ಮೀನುಗಾರಿಕೆ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರು.

# ಅನುಬಂಧ-1

(₹ ಲಕ್ಷಗಳಲ್ಲಿ)

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ವರ್ಷ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಅನುದಾನ ಬಿಡುಗಡೆ | ವೆಚ್ಚ | ಅನುದಾನ ಬಿಡುಗಡೆ | ವೆಚ್ಚ | ಅನುದಾನ ಬಿಡುಗಡೆ | ವೆಚ್ಚ |
| 1 | 3051-02-102-0-08 ಕರ್ನಾಟಕ ಜಲಸಾರಿಗೆ ಮಂಡಳಿ -101 ಸಹಾಯಾನುದಾನ- ವೇತನಗಳು | 920.00 | 909.85 | 1077.00 | 165.61 | 1205.11 | 1204.89 |
| 2 | 3051-02-102-0-08 ಕರ್ನಾಟಕ ಜಲಸಾರಿಗೆ ಮಂಡಳಿ -103 ಸಹಾಯಾನುದಾನ- ಸಾಮಾನ್ಯ | 668.24 | 666.63 | 2946.32 | 2946.31 | 2800.00 | 2799.52 |
| 3 | 3051-02-102-0-08 ಕರ್ನಾಟಕ ಜಲಸಾರಿಗೆ ಮಂಡಳಿ -115 ಸಹಾಯಾನುದಾನ- ಗುತ್ತಿಗೆ/ಹೊರಗುತ್ತಿಗೆ | 184.22 | 182.77 | 275.41 | 275.41 | 374.25 | 374.25 |
| 4 | 5051-02-211-0-02 ಕೇ.ಪು.ಯೋ.-ಸಿ.ಎಸ್.ಎ. ಕೇಂದ್ರದ ಪಾಲು-ಸಾಗರಮಾಲ ಯೋಜನೆ-ಹೂಳು ತೆಗೆಯುವ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿ- 132 ಬಂಡವಾಳ ವೆಚ್ಚಗಳು | 0.00 | 0.00 | 0.00 | 0.00 | 610.00 | 500.79 |
| 5 | 5051-02-211-0-03 ಕೇ.ಪು.ಯೋ.-ಸಿ.ಎಸ್.ಎ.- ರಾಜ್ಯದ ಪಾಲು-ಸಾಗರಮಾಲ ಯೋಜನೆ-ಹೂಳು ತೆಗೆಯುವ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿ- 132 ಇತರೆ ಬಂಡವಾಳ ವೆಚ್ಚಗಳು | 2038.00 | 2038.00 | 650.00 | 557.18 | 200.00 | 200.00 |
| 6 | 5051-80-001-0-01 ಕರ್ನಾಟಕ ಜಲಸಾರಿಗೆ ಮಂಡಳಿಯ ಬಂಡವಾಳ ವೆಚ್ಚಗಳು-132 ಇತರೆ ಬಂಡವಾಳ ವೆಚ್ಚಗಳು | 1430.00 | 1430.00 | 1500.00 | 1499.91 | 1500.00 | 1343.56 |
| 7 | 4711-02-103-2-02 ಸಮುದ್ರ ಕೊರೆತ ನಿಯಂತ್ರಣ ಕಾಮಗಾರಿಗಳು-139 ಪ್ರಧಾನ ಕಾಮಗಾರಿಗಳು | 2262.00 | 2262.00 | 2000.00 | 2000.00 | 2857.00 | 2857.00 |

Kavitha L R

ನಿರ್ದೇಶಕರು
ಬಂದರು ಮತ್ತು ಸದಸ್ಯರು
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರವಾರ